# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 2065 (2463) |
| ಉತ್ತರಿಸಬೇಕಾದ ದಿನಾಂಕ | : | 27.03.2026 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಜಲ ಜೀವನ್ ಮಿಷನ್ ಹಾಗೂ ಹರ್ ಘರ್ ಜಲ ಯೋಜನೆಯ ಉದ್ದೇಶವೇನು; ಯೋಜನೆಯು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು; ಹಾಗೂ ಯಾವ ಕಾಲಮಿತಿಯೊಳಗೆ ಸದರಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ ಯೋಜನೆಯು 15 ಆಗಸ್ಟ್ 2019 ರಂದು ಜಾರಿಗೆ ಬಂದಿದ್ದು, ಸದರಿ ಕಾರ್ಯಕ್ರಮದಡಿ 2024ರೊಳಗಾಗಿ ರಾಜ್ಯದ ಎಲ್ಲಾ ಗ್ರಾಮೀಣ ಮನೆಗಳಿಗೆ 55 LPCD ಯಂತೆ ಶುದ್ಧ ಕುಡಿಯುವ ನೀರನ್ನು ಕಾರ್ಯಾತ್ಮಕ ನಳ ಸಂಪರ್ಕ ಮೂಲಕ ಸಮುದಾಯದ ಸಹಭಾಗಿತ್ವದೊಂದಿಗೆ ಒದಗಿಸುವ ಉದ್ದೇಶ ಹೊಂದಲಾಗಿತ್ತು.<br>ಕೇಂದ್ರ ಸರ್ಕಾರದ 2025-26ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಜಲ ಜೀವನ್ ಮಿಷನ್ ಯೋಜನೆಯನ್ನು 2028ರವರೆಗೆ ವಿಸ್ತರಿಸಲಾಗಿರುತ್ತದೆ.<br>ಹರ್ ಘರ್ ಜಲ್ ಎನ್ನುವುದು ಗ್ರಾಮದಲ್ಲಿ ಯೋಜನೆಯು ಪೂರ್ಣಗೊಂಡಿರುವುದನ್ನು ಘೋಷಿಸುವ ಪ್ರಕ್ರಿಯೆಯಾಗಿದ್ದು, ಅಕ್ಟೋಬರ್-2021 ರಂದು ಪ್ರಾರಂಭಿಸಲಾಗಿದೆ. ಸದರಿ ಕಾರ್ಯಕ್ರಮದಡಿ ಶೇ.100ರಷ್ಟು ನಳ ಸಂಪರ್ಕ ಹೊಂದಿರುವ ಗ್ರಾಮಗಳನ್ನು ಹರ್ ಘರ್ ಜಲ್ ಎಂದು ಗ್ರಾಮಮಟ್ಟದ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ (VWSC) ರವರಿಂದ ಘೋಷಿಸಲಾಗುತ್ತದೆ. |
| ಆ) | ಈ ಯೋಜನೆಗಾಗಿ ಪ್ರಾರಂಭದಿಂದ ಈವರೆಗೂ ಕೇಂದ್ರದಿಂದ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಗೊಳಿಸಿರುವ ಅನುದಾನವೆಷ್ಟು; (ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ ಯೋಜನೆಯಡಿ 2019-20 ರಿಂದ 2025-26ನೇ ಸಾಲಿನವರೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ | ವರ್ಷ | ಬಿಡುಗಡೆಯಾದ ಅನುದಾನ (ರೂ.ಕೋಟಿಗಳಲ್ಲಿ) | | |
|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು |
| 1 | 2019-20 | 546.06 | 333.01 | 879.07 |
| 2 | 2020-21 | 446.36 | 566.17 | 1012.53 |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | (table below) |

| | | | | |
| --- | --- | --- | --- | --- |
| 3 | 2021-22 | 2504.40 | 3345.45 | 5849.84 |
| 4 | 2022-23 | 2725.93 | 4914.49 | 7640.41 |
| 5 | 2023-24 | 4966.62 | 6309.73 | 11276.35 |
| 6 | 2024-25 | 570.66 | 7602.99 | 8173.65 |
| 7 | 2025-26 | 0.00 | 4,000.00 | 4,000.00 |
| | **ಒಟ್ಟು** | **11,760.03** | **27,071.84** | **38,831.85** |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| ಇ) | ಜಲ ಜೀವನ್ ಮಿಷನ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಲು ಸರ್ಕಾರವು ಎದುರಿಸುತ್ತಿರುವ ಸಮಸ್ಯೆಗಳು ಯಾವುವು; ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಜಲ ಜೀವನ್ ಮಿಷನ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಲು ಗ್ರಾಕುನೀ&ನೈ ಇಲಾಖೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.<br>1. ರಾಜ್ಯವು ದೇಶದ 2ನೇ ಅತೀ ಶುಷ್ಕ ಪ್ರದೇಶವಾಗಿದ್ದು, ಸುಸ್ಥಿರ ಜಲಮೂಲವನ್ನು ಗುರುತಿಸಲು ಹೆಚ್ಚಿನ ಸಮಯಾವಕಾಶ ತೆಗೆದುಕೊಳ್ಳಲಾಗಿದೆ.<br>2. ಬಹುಗ್ರಾಮ ಕುಡಿಯುವ ನೀರಿನ ಮೇಲೆ ಅವಲಂಬಿತವಾಗಿರುವ ಏಕ ಗ್ರಾಮ ಯೋಜನೆಗಳು ಭೌತಿಕವಾಗಿ ಪೂರ್ಣಗೊಂಡಿದ್ದರೂ ಬಹುಗ್ರಾಮ ಯೋಜನೆ ಪೂರ್ಣಗೊಳ್ಳುವರೆಗೆ ಹಾಲಿ ಲಭ್ಯವಿರುವ ಸ್ಥಳೀಯ ಮೂಲದಿಂದ ನೀರು ಸರಬರಾಜು ಮಾಡಲಾಗುತ್ತಿದೆ.<br>3. ಯೋಜನೆಯ ಗಾತ್ರಗಳಿಗೆ ಅನುಗುಣವಾಗಿ ಏಕ ಗ್ರಾಮ ಯೋಜನೆ (SVS)ಗಳಿಗೆ 6 ರಿಂದ 9 ತಿಂಗಳುಗಳಷ್ಟು ಹಾಗೂ ಬಹುಗ್ರಾಮ ಯೋಜನೆ (MVS)ಗಳಿಗೆ 11 ರಿಂದ 36 ತಿಂಗಳುಗಳಷ್ಟು ಅನುಷ್ಠಾನ ಸಮಯ ನಿಗದಿ ಪಡಿಸಲಾಗಿರುತ್ತದೆ. ಸದರಿ ಯೋಜನೆಗಳ ಅನುಷ್ಠಾನದಲ್ಲಿ ನಿವೇಶನ/ಜಾಗಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಇಲಾಖೆ/ ಪ್ರಾಧಿಕಾರ ಅಥವಾ ಖಾಸಗಿ ವ್ಯಕ್ತಿಗಳಿಂದ ಖರೀದಿಸಬೇಕಾಗಿರುತ್ತದೆ. ಆದುದರಿಂದ ಹೆಚ್ಚಿನ ಸಮಯಾವಾಕಾಶ ತೆಗೆದುಕೊಳ್ಳಲಾಗುತ್ತಿದೆ.<br>4. (i) ಅರಣ್ಯ ಇಲಾಖೆಯ ಜಾಗಗಳನ್ನು (ಸಂರಕ್ಷಿತ ಅರಣ್ಯ ವಲಯ, ಸಾಮಾಜಿಕ ಅರಣ್ಯ ವಲಯ, ವನ್ಯ ಜೀವಿ ಅರಣ್ಯ ವಲಯ) ಪಡೆಯಲು ಅರಣ್ಯ ಸಂರಕ್ಷಣಾ ಕಾಯ್ದೆಯನ್ವಯ ಅನುಮತಿ ಪಡೆಯುವ ಪ್ರಕ್ರಿಯೆ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ.<br>(ii) ರೈಲ್ವೇ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಲೋಕೋಪಯೋಗಿ ಇಲಾಖೆ ಹಾಗೂ ಇತರೆ ಇಲಾಖೆಗಳ ಸ್ವತ್ತುಗಳ, ಬಳಕೆಗೆ ನಿರಾಕ್ಷೇಪಣಾ ಪತ್ರ ಪಡೆಯಬೇಕಿರುತ್ತದೆ.<br>(iii) ಜಾಕ್ ವೆಲ್ ನಿರ್ಮಾಣ ಸ್ಥಳಗಳ ತೀರುವಳಿಗೆ ಸಂಬಂಧಿಸಿದ ನಿಗಮ / ಇಲಾಖೆಗಳಿಂದ ಸಹಮತಿ ಪಡೆಯುವುದು.<br>(iv) ಖಾಸಗಿ ನಿವೇಶನಗಳನ್ನು ಗುತ್ತಿಗೆದಾರರು ಖರೀದಿಸಬೇಕಾಗಿರುವುದು ಹಾಗೂ ಸಂಬಂಧಿತ ಹಕ್ಕು ದಾಖಲೆ ಪಡೆಯಲು ವಿಳಂಬ.<br><br>ರಾಜ್ಯವು ಅತೀ ಶುಷ್ಕ ಪ್ರದೇಶವಾಗಿರುವುದರಿಂದ ಬಹುತೇಕವಾಗಿ ಅಂತರ್ಜಲವನ್ನು ಜಲಮೂಲವನ್ನಾಗಿ ಅವಲಂಬಿಸಿರುತ್ತದೆ. ಜಲ ಜೀವನ್ ಮಿಷನ್ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿರುವ ಬಹುಗ್ರಾಮ ಕುಡಿಯುವ ನೀರು ಯೋಜನೆಗೆ ಸುಸ್ಥಿರ ಜಲಮೂಲಗಳಾದ ಪ್ರಮುಖ ನದಿಗಳನ್ನು ಹಾಗೂ ಜಲಾಶಯಗಳನ್ನು ಜಲಮೂಲಗಳನ್ನಾಗಿ ಪರಿಗಣಿಸಲಾಗಿರುತ್ತದೆ.<br>ರಾಜ್ಯದಲ್ಲಿ ಏಕಗ್ರಾಮ ಹಾಗೂ ಬಹುಗ್ರಾಮ ಯೋಜನೆಗಳನ್ನು ಏಕಕಾಲಕ್ಕೆ ಪ್ರಾರಂಭಿಸಲಾಗಿದ್ದು, ಬಹುಗ್ರಾಮ ಅವಲಂಬಿತ ಬಹುತೇಕ ಏಕಗ್ರಾಮ ಯೋಜನೆಗಳು ಭೌತಿಕವಾಗಿ ಮೊದಲು ಪೂರ್ಣಗೊಂಡಿದ್ದರೂ, ಗ್ರಾಮಗಳಲ್ಲಿ ಲಭ್ಯವಿರುವ ಕೊಳವೆ ಬಾವಿಗಳಿಂದ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಸದರಿ ಗ್ರಾಮಗಳಿಗೆ ಸಂಬಂಧಿಸಿದ ಬಹುಗ್ರಾಮ ಯೋಜನೆಯು ಪೂರ್ಣಗೊಂಡ ನಂತರ ಶಾಶ್ವತವಾಗಿ ಪೂರ್ಣಪ್ರಮಾಣದಲ್ಲಿ ಶುದ್ಧ ಕುಡಿಯುವ ನೀರನ್ನು ಕಾರ್ಯಾತ್ಮಕ ನಳ ಸಂಪರ್ಕಗಳ ಮೂಲಕ ಒದಗಿಸಲಾಗುತ್ತದೆ.<br>ರಾಜ್ಯದಲ್ಲಿ ಬಹುತೇಕ ಬಹುಗ್ರಾಮ ಕುಡಿಯುವ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ನೀರು ಯೋಜನೆಗಳನ್ನು DBOT ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಗುತ್ತಿಗೆಯಡಿ ಯೋಜನೆಗೆ ಅಗತ್ಯವಿರುವ ನಿವೇಶನಗಳ ಅನುಮತಿಯನ್ನು ವಿವಿಧ ಇಲಾಖೆ / ಸಂಸ್ಥೆಯಿಂದ ಪಡೆಯುವುದು ಸಂಬಂಧಪಟ್ಟ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಆದಾಗ್ಯೂ, ಇಲಾಖೆಯು ಜಿಲ್ಲಾ ಮತ್ತು ರಾಜ್ಯದ ಹಂತದಲ್ಲಿ ಇಲಾಖೆ / ಸಂಸ್ಥೆಗಳೊಂದಿಗೆ ಕಾಲ ಕಾಲಕ್ಕೆ ಉನ್ನತ್ತ ಮಟ್ಟದ ಸಭೆಗಳನ್ನು ನಡೆಸಿ ಶೀಘ್ರ ಅನುಮತಿ ಪಡೆಯಲು ಕ್ರಮಕೈಗೊಳ್ಳಲಾಗುತ್ತಿದೆ. |
| ಈ) | ಜೆಜೆಎಂ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಉಪಗುತ್ತಿಗೆ ನೀಡುವ ಅವಕಾಶ ಕಲ್ಪಿಸಿರುವುದಿಲ್ಲವಾದರೂ, ಉಪಗುತ್ತಿಗೆ ನೀಡಿರುವುದು ಸರ್ಕಾರದ ಗಮನಕ್ಕಿದೆಯೇ; ಇದ್ದಲ್ಲಿ, ಉಪಗುತ್ತಿಗೆ ನೀಡಿರುವವರ ವಿರುದ್ಧ ಸರ್ಕಾರದಿಂದ ಯಾವ ಕ್ರಮಕೈಗೊಳ್ಳಲಾಗಿದೆ; (ಸಂಪೂರ್ಣವಾದ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ ಯೋಜನೆಯಡಿ 2 ಭಾಗಗಳಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>1) ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು DBOT ಆಧಾರದ ಮೇಲೆ, ಸಗಟು ನೀರು ಸರಬರಾಜಿಗೆ ಅನುಷ್ಠಾನಗೊಳಿಸಲಾಗುತ್ತಿದ್ದು,<br>2) ಗ್ರಾಮಾಂತರದ ನೀರು ಸರಬರಾಜು ಮತ್ತು ನಳ ಸಂಪರ್ಕ ಒದಗಿಸುವ ಕಾಮಗಾರಿಗಳನ್ನು ಐಟಂ ದರಗಳ ಆಧಾರದ ಮೇಲ ಟೆಂಡರ್ ಆಹ್ವಾನಿಸಲಾಗುತ್ತಿದೆ.<br>ಅ) ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ DBOT ಆಧಾರದಲ್ಲಿ ಟೆಂಡರ್ ಆಹ್ವಾನಿಸಲಾಗುತ್ತಿದ್ದು, ಟೆಂಡರ್ ನಲ್ಲಿಯೇ Electrical ಮತ್ತು SCADA ಘಟಕಗಳಿಗೆ ಉಪಗುತ್ತಿಗೆಯನ್ನು ನೀಡಲು ಅವಕಾಶ ಕಲ್ಪಿಸಲಾಗಿದ್ದು, ಉಪಗುತ್ತಿಗೆದಾರರ ಮಾಹಿತಿಯನ್ನು ಪರಿಶೀಲಿಸಿ ಟೆಂಡರ್ ಅನ್ನು ಅನುಮೋದಿಸಲಾಗುತ್ತಿದೆ.<br>ಆ) ಗ್ರಾಮಾಂತರದ ನೀರು ಸರಬರಾಜು ಮತ್ತು ನಳ ಸಂಪರ್ಕ ಕಾಮಗಾರಿಗಳನ್ನು ಐಟಂ ದರಗಳ ಆಧಾರದ ಮೇಲೆ ಟೆಂಡರ್ ಆಹ್ವಾನಿಸಲಾಗುತ್ತಿದ್ದು, ಈ ಕಾಮಗಾರಿಗಳಲ್ಲಿ ಯಾವುದೇ ಉಪಗುತ್ತಿಗೆ ನೀಡಲು ಅವಕಾಶವಿರುವುದಿಲ್ಲ.<br>ಆದಾಗ್ಯೂ, ಉಪಗುತ್ತಿಗೆ ನೀಡಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ, ಅಂತಹ ಗುತ್ತಿಗೆದಾರರ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ವಿರುದ್ಧ ಗುತ್ತಿಗೆಯನ್ನು ರದ್ದುಪಡಿಸಿ, ಕಪ್ಪುಪಟ್ಟಿಗೆ ಸೇರಿಸಲು ಮತ್ತು ಅವರ ವಿರುದ್ಧ ಕಾನೂನು ಕ್ರಮ ಕ್ರಮಕೈಗೊಳ್ಳಲಾಗುವುದು. |
| ಉ) | ಜಲ ಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಗ್ರಾಮೀಣ ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಕೈಗೊಳ್ಳುವಾಗ ಅಗತ್ಯ ಅಂಶಗಳನ್ನು ಪಾಲಿಸಲು ಹಾಗೂ ಗುಣಮಟ್ಟವನ್ನು ಕಾಯ್ದುಕೊಳ್ಳುವ ಕುರಿತು ಸರ್ಕಾರ ಆದೇಶಿಸಿದ್ದರೂ ಸಹ ಅಗತ್ಯ ಅಂಶಗಳನ್ನು ಪಾಲಿಸದೇ ಮತ್ತು ಕಳಪೆ ಕಾಮಗಾರಿಯನ್ನು ಮಾಡಿರುವವರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ? (ಸಂಪೂರ್ಣವಾದ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ (JJM) ಅನುಷ್ಠಾನದಲ್ಲಿ ಕಾಮಗಾರಿಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯೋಜನೆಯಲ್ಲಿ ಬಳಸುವ ಎಲ್ಲಾ HDPE ಪೈಪ್ ಗಳನ್ನು M/S Central Institute of Petrochemicals Engineering & Technology (CIPET) ಸಂಸ್ಥೆಯ ಪ್ರಯೋಗಾಲಯದಲ್ಲಿ ಅಗತ್ಯವಿರುವ ಗುಣಮಟ್ಟಗಳನ್ನು ಪರೀಕ್ಷಿಸಿ ಖಚಿತಪಡಿಸಿದ ನಂತರವೇ, ಕಾಮಗಾರಿಗಳಲ್ಲಿ ಉಪಯೋಗಿಸಲಾಗಿರುತ್ತದೆ ಹಾಗೂ ರಾಜ್ಯ ಮಟ್ಟದ 3rd Part Agency ಯಿಂದಲೂ ಸದರಿ ಗ್ರಾಮಗಳಲ್ಲಿನ ಕಾಮಗಾರಿ ಪರಿಶೀಲನೆ ನಡೆಸುತ್ತಿದ್ದು, ಸದರಿಯವರ ವರದಿಯಲ್ಲಿ ನ್ಯೂನ್ಯತೆಗಳು ಕಂಡುಬಂದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಹಾಗೂ ಕಾಮಗಾರಿಗಳಲ್ಲಿನ ಗುತ್ತಿಗೆದಾರರ ಮೇಲೆ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಲಾಗುತ್ತಿದೆ. ಸಂಪೂರ್ಣವಾದ ವಿವರವನ್ನು **ಅನುಬಂಧ-01ರಲ್ಲಿ** ಲಗತ್ತಿಸಿದೆ. |

ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/ 187 /2025-26

(ಪ್ರಿಯಾಂಕ್ ಖರ್ಗೆ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

**ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2065(2463)**

**ಅನುಬಂಧ-01**

| ಕ್ರ ಸಂ | ಜಿಲ್ಲೆ | ಯೋಜನೆಯ ವಿವರಗಳು | ದೂರಿನ ಕುರಿತು | ಇಲಾಖೆ ಕೈಗೊಂಡ ಕ್ರಮ | ಪ್ರಸ್ತುತ ಸ್ಥಿತಿ |
|---|---|---|---|---|---|
| 1 | ಕಲಬುರಗಿ | ಡಿಎಮ್‌ಎಫ್ (DMF) ಅಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿ | ಕಲಬುರಗಿ ತಾಲ್ಲೂಕಿನ ಅಫ್ಜಲ್‌ಪುರ ವಿಧಾನಸಭಾ ಕ್ಷೇತ್ರದಲ್ಲಿ ಜಲ ಜೀವನ್ ಮಿಷನ್ (JJM) ಅಡಿಯಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 25.06.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ, ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್,ವೃತ್ತ ಕಲಬುರಗಿ ಅವರಿಂದ ಪಡೆದ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ ಎಂದು ವರದಿಯಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 2 | ಕಲಬುರಗಿ | ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ 224 ಮನೆಗಳಿಗೆ ಮನೆ ಮನೆಗೆ ನಳ ಸಂಪರ್ಕ (FHTC) ಒದಗಿಸುವುದು. | ಕಲಬುರಗಿ ಜಿಲ್ಲೆಯ ಆಲಂದ ತಾಲ್ಲೂಕಿನಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 26.07.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ, ಅಧೀಕ್ಷಕ ಇಂಜಿನಿಯರ್,ವೃತ್ತ ಕಲಬುರಗಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರಿಂದ ಪಡೆದ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 3 | ಕಲಬುರಗಿ | ಚಿಂಚೋಳಿ ತಾಲ್ಲೂಕಿನ ಹೋಸಳ್ಳಿ ಗ್ರಾಮದ ಹೋಸಳ್ಳಿ ವಾಸಸ್ಥಳದಲ್ಲಿ ಪಿಡಬ್ಲ್ಯೂಎಸ್ ಯೋಜನೆಯ ಮೂಲಕ 384 ಮನೆಗಳಿಗೆ FHTC ಒದಗಿಸುವುದು. | ಕಲಬುರಗಿ ಜಿಲ್ಲೆಯ ಕಲಗಿ ತಾಲ್ಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 31.05.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ, ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 4 | ಕೊಪ್ಪಳ | ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಮುಟ್ಟಲ್ ಗ್ರಾಮದ ವಿವಿಧ ವಾಸಸ್ಥಳಗಳಲ್ಲಿ (Hirebidnal–280, Honnahunasi–185, Bedavatti–256, Chenduru–246, Yediyapur–450, Kadralli–235, Muttal–130 ಮನೆಗಳಿಗೆ) FHTC ಒದಗಿಸುವುದು. | ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ಶಿರೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಚಂದೂರ ಗ್ರಾಮದಲ್ಲಿ JJM ಅಡಿಯಲ್ಲಿ ನಡೆದ ಕುಡಿಯುವ ನೀರಿನ ಯೋಜನಾ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 31.05.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ, ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಸ್ಥಳ ಪರಿಶೀಲನೆ ನಡೆಸಿ, ಸ್ಥಳದಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |

| ಕ್ರ ಸಂ | ಜಿಲ್ಲೆ | ಯೋಜನೆಯ ವಿವರಗಳು | ದೂರಿನ ಕುರಿತು | ಇಲಾಖೆ ಕೈಗೊಂಡ ಕ್ರಮ | ಪ್ರಸ್ತುತ ಸ್ಥಿತಿ |
|---|---|---|---|---|---|
| 5 | ಕೊಪ್ಪಳ | ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಚಿಕ್ಕಬೆನಕಲ್ ಹಾಗೂ ಇತರ 61 ವಾಸಸ್ಥಳಗಳಿಗೆ ಕುಡಿಯುವ ನೀರು ಒದಗಿಸುವ ಬಹುಗ್ರಾಮ ನೀರು ಸರಬರಾಜು ಯೋಜನೆ (MVS). | ಕೊಪ್ಪಳ ಜಿಲ್ಲೆಯಲ್ಲಿ ಜಾರಿಗೆ ತಂದ ಕುಡಿಯುವ ನೀರಿನ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 09.07.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ, ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರುನ್ನು ಕೈಬಿಡಲಾಗಿದೆ. |
| 6 | ಬೀದರ್ | ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಕಠಳ್ಳಿ ಗ್ರಾಮದಲ್ಲಿ 300 ಮನೆಗಳಿಗೆ FHTC ಒದಗಿಸುವುದು. | ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನ ಕಠಳ್ಳಿ ಗ್ರಾಮದಲ್ಲಿ JJM ಅಡಿಯಲ್ಲಿ ಜಾರಿಗೆ ತಂದ ಕುಡಿಯುವ ನೀರಿನ ಯೋಜನೆ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಅಧೀಕ್ಷಕ ಇಂಜಿನಿಯರ್ ಅವರು 31.10.2025 ರಂದು ಕಾಮಗಾರಿಯನ್ನು ಪರಿಶೀಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ, ಕಲಬುರಗಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರುನ್ನು ಕೈಬಿಡಲಾಗಿದೆ. |
| 7 | ಬೀದರ್ | ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಕೋಲಾರ (ಬಿ) ಗ್ರಾಮದಲ್ಲಿ 428 ಮನೆಗಳಿಗೆ FHTC ಒದಗಿಸುವುದು. | ಬೀದರ್ ತಾಲ್ಲೂಕಿನ ಕೋಲಾರ್ (ಬಿ) ಗ್ರಾಮದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಅಧೀಕ್ಷಕ ಇಂಜಿನಿಯರ್ ಅವರು 31.10.2025 ರಂದು ಕಾಮಗಾರಿಯನ್ನು ಪರಿಶೀಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರುನ್ನು ಕೈಬಿಡಲಾಗಿದೆ. |
| 8 | ಯಾದಗಿರಿ | ಯಾದಗಿರಿ ಜಿಲ್ಲೆಯ ಶೋರಾಪುರ ತಾಲ್ಲೂಕಿನ ಮಲ್ಲಾ (ಬಿ) ಗ್ರಾಮದಲ್ಲಿ ಎಸ್‌ವಿಎಸ್ ಯೋಜನೆಯ ಮೂಲಕ 291 ಮನೆಗಳಿಗೆ FHTC ಒದಗಿಸುವುದು. | ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ನಾಮಲಾಬಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ JJM ಅಡಿಯಲ್ಲಿ ನಡೆದ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್, ಯಾದಗಿರಿ ಅವರು 25.06.2024 ರಂದು ಕಾರ್ಯನಿರ್ವಾಹಕ ಇಂಜಿನಿಯರ್, ಜಿಲ್ಲಾ ಪಂಚಾಯತ್ ಅವರಿಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದ್ದರು. ಈ ಮಧ್ಯದಲ್ಲಿ, ಅಧೀಕ್ಷಕ ಇಂಜಿನಿಯರ್ ವೃತ್ತ ಕಲಬುರಗಿ ಅವರು 03.11.2025 ರಂದು ಕಾಮಗಾರಿಯನ್ನು ಪರಿಶೀಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರುನ್ನು ಕೈಬಿಡಲಾಗಿದೆ. |

| ಕ್ರ ಸಂ | ಜಿಲ್ಲೆ | ಯೋಜನೆಯ ವಿವರಗಳು | ದೂರಿನ ಕುರಿತು | ಇಲಾಖೆ ಕೈಗೊಂಡ ಕ್ರಮ | ಪ್ರಸ್ತುತ ಸ್ಥಿತಿ |
|---|---|---|---|---|---|
| 9 | ಯಾದಗಿರಿ | ಯಾದಗಿರಿ ತಾಲ್ಲೂಕಿನ ಹಟ್ಟಿಕುಣಿ ಗ್ರಾಮದಲ್ಲಿ ಎಸ್‌ವಿಎಸ್ ಯೋಜನೆಯ ಮೂಲಕ 980 ಮನೆಗಳಿಗೆ FHTC ಒದಗಿಸುವುದು. | ಯಾದಗಿರಿ ಜಿಲ್ಲೆಯ ಗುರುಮಠಕಲ್ ವಿಧಾನಸಭಾ ಕ್ಷೇತ್ರದ ಹಟ್ಟಿಕುಣಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ JJM ಅಡಿಯಲ್ಲಿ ನಡೆದ ಕುಡಿಯುವ ನೀರಿನ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು ಹಾಗೂ ಶಿಸ್ತು ಕ್ರಮ ಕೈಗೊಳ್ಳುವಂತೆ ವಿನಂತಿ. | ಪರಿಶೀಲಿಸಲು 05.08.2024 ರಂದು ತನಿಖಾ ತಂಡವನ್ನು ರಚಿಸಲಾಯಿತು ಮತ್ತು ತಂಡವು 24.10.2024 ರಂದು ವರದಿಯನ್ನು ಸಲ್ಲಿಸಿತು. | ತನಿಖಾ ತಂಡ ಸಲ್ಲಿಸಿದ ವರದಿ ಪ್ರಕಾರ, ಕಲವು ಕಾಮಗಾರಿಗಳ ಅನುಷ್ಠಾನದಲ್ಲಿ ಲೋಪಗಳು ಕಂಡುಬಂದಿರುತ್ತವೆ. ಅದರಂತೆ 28.04.2025 ಹಾಗೂ 13.08.2025 ರಂದು ಸಿಇಒ, ಜಿಲ್ಲಾ ಪಂಚಾಯತ್, ಯಾದಗಿರಿ ಅವರಿಗೆ ಸಂಬಂಧಿಸಿದ ಇಂಜಿನಿಯರ್ಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ನೋಟಿಸ್ ನೀಡಲು, ಲಿಖಿತ ವಿವರಣೆ ಪಡೆಯಲು ಹಾಗೂ ಟಿಪ್ಪಣಿಗಳೊಂದಿಗೆ ವಿವರವಾದ ವರದಿ ಸಲ್ಲಿಸಲು ಪತ್ರ ನೀಡಲಾಗಿದೆ.ಅಂತಿಮ ವರದಿಯನ್ನು ಸ್ವೀಕರಿಸಲಾಗಿದೆ,ತನಿಖೆ ಪ್ರಗತಿಯಲ್ಲಿದೆ. |
| 10 | ಯಾದಗಿರಿ | ಯಾದಗಿರಿ ತಾಲ್ಲೂಕಿನ ತುರಕನಾಡೊಡ್ಡಿ ಗ್ರಾಮದಲ್ಲಿ ಎಸ್‌ವಿಎಸ್ ಯೋಜನೆಯ ಮೂಲಕ 224 ಮನೆಗಳಿಗೆ FHTC ಒದಗಿಸುವುದು. | ಗುರುಮಠಕಲ್ ತಾಲ್ಲೂಕಿನ ಅಜಲಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ತುರಕನಡೊಡ್ಡಿ ಗ್ರಾಮದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | | |
| 11 | ಯಾದಗಿರಿ | ಯಾದಗಿರಿ ಜಿಲ್ಲೆಯ ಯರ್ಗೋಳ ಗ್ರಾಮದ ಯರ್ಗೋಳ ವಾಸಸ್ಥಳದಲ್ಲಿ ಎಸ್‌ವಿಎಸ್ ವಿಸ್ತರಣೆ ಮೂಲಕ 1780 ಮನೆಗಳಿಗೆ FHTC ಒದಗಿಸುವುದು. | ಯಾದಗಿರಿ ತಾಲ್ಲೂಕಿನ ಏರ್ಗೋಳ ಗ್ರಾಮದಲ್ಲಿ JJM ಅಡಿಯಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | | |
| 12 | ರಾಯಚೂರು | ರಾಯಚೂರು ತಾಲ್ಲೂಕಿನ ದೇವನಪಲ್ಲಿ ಗ್ರಾಮಕ್ಕೆ FHTC ಒದಗಿಸುವುದು. | ರಾಯಚೂರು ತಾಲ್ಲೂಕಿನ ದೇವನಪಳ್ಳಿ ಗ್ರಾಮದಲ್ಲಿ ಪ್ರಧಾನಮಂತ್ರಿ ಯೋಜನೆ (2022–23) ಅಡಿಯಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 26.12.2023 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್,ವೃತ್ತ ಬಳ್ಳಾರಿ ಅವರಿಗೆ ಕಾಮಗಾರಿ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ. | ವರದಿ ಇನ್ನೂ ನಿರೀಕ್ಷೆಯಲ್ಲಿದೆ. |
| 13 | ರಾಯಚೂರು | ರಾಯಚೂರು ಜಿಲ್ಲೆಯ ರಾಯಚೂರು, ದೇವದುರ್ಗ, ಮಾನ್ವಿ, ಲಿಂಗಸುಗೂರು ಹಾಗೂ ಸಿಂಧನೂರು ತಾಲ್ಲೂಕುಗಳಿಗೆ FHTC ಒದಗಿಸುವುದು. | ರಾಯಚೂರು ಜಿಲ್ಲೆಯಲ್ಲಿ JJM ಅಡಿಯಲ್ಲಿ ಜಾರಿಗೆ ತಂದ ಕುಡಿಯುವ ನೀರಿನ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 22.08.2023 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರಿಗೆ ಕಾಮಗಾರಿ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ. | ವರದಿ ಇನ್ನೂ ನಿರೀಕ್ಷೆಯಲ್ಲಿದೆ. |

| ಕ್ರ ಸಂ | ಜಿಲ್ಲೆ | ಯೋಜನೆಯ ವಿವರಗಳು | ದೂರಿನ ಕುರಿತು | ಇಲಾಖೆ ಕೈಗೊಂಡ ಕ್ರಮ | ಪ್ರಸ್ತುತ ಸ್ಥಿತಿ |
|---|---|---|---|---|---|
| 14 | ರಾಯಚೂರು | ರಾಯಚೂರು ಜಿಲ್ಲೆಯ 1406 ಗ್ರಾಮೀಣ ವಾಸಸ್ಥಳಗಳು ಹಾಗೂ 7 ನಗರ ಸ್ಥಳೀಯ ಸಂಸ್ಥೆಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ. | ರಾಯಚೂರು ಜಿಲ್ಲೆಯಲ್ಲಿ ಜಾರಿಗೆ ತಂದ MVS DBOT ಯೋಜನೆಗೆ ಸಂಬಂಧಿಸಿದ ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 16.06.2023 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ತನಿಖೆಗೆ ನೇಮಿಸಲಾದ ಎಸ್‌ಕ್ಯೂಎಂ ಅವರಿಂದ ಪಡೆದ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರುನ್ನು ಕೈಬಿಡಲಾಗಿದೆ. |
| 15 | ರಾಯಚೂರು | ರಾಯಚೂರು ತಾಲ್ಲೂಕಿನ ವಿವಿಧ ಗ್ರಾಮಗಳಿಗೆ FHTC ಒದಗಿಸುವುದು. | ರಾಯಚೂರು ತಾಲ್ಲೂಕಿನಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 26.06.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರಿಗೆ ಕಾಮಗಾರಿ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ. | ವರದಿ ಇನ್ನೂ ನಿರೀಕ್ಷೆಯಲ್ಲಿದೆ. |
| 16 | ವಿಜಯನಗರ | ವಿಜಯನಗರ ಜಿಲ್ಲೆಯ ಕಮಲಾಪುರ ತಾಲ್ಲೂಕಿನಲ್ಲಿ ಜಲ್ ಜೀವನ್ ಮಿಷನ್ (JJM) ಕಾಮಗಾರಿಗಳು. | ವಿಜಯನಗರ ಜಿಲ್ಲೆಯ ಕಮಲಾಪುರ ತಾಲ್ಲೂಕಿನಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 30.09.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರಿಗೆ ಕಾಮಗಾರಿ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ. | ದೂರು ಕಲಬುರಗಿ ಜಿಲ್ಲೆಗೆ ಸಂಬಂಧಿಸಿರುವುದರಿಂದ, ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ರವರು ಪರಿಶೀಲನೆ ನಡೆಸಿ, ಮಾಡಿದ ಕೆಲಸ ತೃಪ್ತಿಕರವಾಗಿದೆ ಎಂದು ವರದಿ ಮಾಡಿದ್ದಾರೆ. ಆದ್ದರಿಂದ, ದೂರನ್ನು ಕೈಬಿಡಲಾಗಿದೆ. |
| 17 | ವಿಜಯನಗರ | ವಿಜಯನಗರ ಜಿಲ್ಲೆಯ ಕುಡ್ಲಿಗಿ ತಾಲ್ಲೂಕಿನಲ್ಲಿ ಪಾವಗಡಾ ಎಂವಿಎಸ್ ಯೋಜನೆಯ ಮೂಲಕ ಚಿನ್ನನಹಳ್ಳಿ (344), ಹರಕನಹಲು (236), ಹಿರೆವಡ್ಡನಹಳ್ಳಿ (155), ನಡುಮವಿನಹಳ್ಳಿ (133) ಮನೆಗಳಿಗೆ FHTC ಒದಗಿಸುವುದು. | ವಿಜಯನಗರ ಜಿಲ್ಲೆಯ ಕಲಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ನಡುಮಾವಿನಹಳ್ಳಿ, ಹೆರವದ್ದೇರಹಳ್ಳಿ ಮತ್ತು ಚಿನಹಳ್ಳಿ ಗ್ರಾಮಗಳಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 30.09.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ವಲಯ ಅವರು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರುನ್ನು ಕೈಬಿಡಲಾಗಿದೆ. |
| 18 | ವಿಜಯನಗರ | ವಿಜಯನಗರ ಜಿಲ್ಲೆಯ ಕುಡ್ಲಿಗಿ ತಾಲ್ಲೂಕಿನ ಕಲಾಪುರ ಗ್ರಾಮದ ಚಿನ್ನನಹಳ್ಳಿ (344), ಹರಕನಹಲು (236), ಹಿರೆವಡ್ಡನಹಳ್ಳಿ (155) ಹಾಗೂ ನಡುಮವಿನಹಳ್ಳಿ (133) ವಾಸಸ್ಥಳಗಳಲ್ಲಿ ಪಾವಗಡಾ ಬಹುಗ್ರಾಮ ನೀರು ಸರಬರಾಜು ಯೋಜನೆಯ ಮೂಲಕ ಮನೆ ಮನೆಗೆ ನಳ ಸಂಪರ್ಕ (FHTC) ಒದಗಿಸುವುದು. | ಕೊಟ್ಟೂರು ತಾಲ್ಲೂಕಿನ ಕಲಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ನಡುಮಾವಿನಹಳ್ಳಿ ಗ್ರಾಮದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 21.10.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ವಲಯ ಅವರು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರುನ್ನು ಕೈಬಿಡಲಾಗಿದೆ. |